ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಇನ್ನು ನಡೆದುಹೋದ ವಿಷಯಗಳನ್ನು ಹಿಡಿದುಕೊಂಡು ಏನೂ ಮಾಡುವ ಹಾಗಿಲ್ಲವೆನ್ನುವುದು ರಾಘವನಿಗೆ ಮನದಟ್ಟಾಯಿತು.

'ಸುಮ್ನೆ ನಿನ್ನತ್ರ ವಾದ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ನಾಳೆ ತೇಜಣ್ಣ ಬಂದ ಮೇಲೆ ನೀನು ಬಾ. ಅವರತ್ರ ಮಾತಾಡುವ. ಎಂತ ಇಲ್ಲದಿದ್ದರೂ ನಮಗೆ ನನ್ನ ಅಪ್ಪ ಮತ್ತು ಅಜ್ಜ ಬೇಲಿ ಹಾಕಿದ ಜಾಗವನ್ನಾದರೂ ಬಿಟ್ಟು ಕೊಡುತ್ತಾರೋ ನೋಡುವ' ಎಂದನಾದರೂ ಅಲ್ಲಿಯೂ ಒಂದು ಸಮಸ್ಯೆಯಿರುವುದು ಅವನಿಗೆ ಗೊತ್ತಿತ್ತು. ಅಪ್ಪ ಮಾಡಿಕೊಂಡ ಆಸ್ತಿಯನ್ನು ಅಕ್ರಮ ಸಕ್ರಮದಡಿಯಲ್ಲಿ ದೊಡ್ಡಪ್ಪನ ಹೆಸರಿಗೆ ಮಾಡಿಯಾಗಿತ್ತು. ಅದೂ ಪಂಚಾಯಿತಿ ಸದಸ್ಯ ಕೇಚಣ್ಣನಿಗೆ ತಿನ್ನಿಸಿ, ಆ ಜಾಗದಲ್ಲಿರುವ ಎರಡು ಹುಣಸೇ ಮರಗಳನ್ನು ತೋರಿಸಿ ಕೃಷಿ ಭೂಮೀಂತ ಹೇಳಿ, ಹೇಗೂ ರೆಕಾರ್ಡುಗಳನ್ನು ಮಾಡಿಸಿ ಸಕ್ರಮವಾಗಿಸಿಕೊಂಡರೂ, ಈಗ ಅದೇ ಜಾಗದಲ್ಲಿ ಕಲ್ಲುಕೋರೆಯವರಿಗೆ ಕಟ್ಟಿಸಿದ ಜೋಪಡಿಯಲ್ಲಿ ಹೋಟೆಲು ಕಟ್ಟಿದ್ದು ಕಷ್ಟವಾಯಿತು. ಆ ಹೋಟೆಲು ಈಗ ಬಡತನದಲ್ಲಿರುವ ಮಗಳಿಗೆ ವಾಸ್ತವ್ಯಕ್ಕೆ ಬಿಟ್ಟುಕೊಟ್ಟಿರುವುದರಿಂದ ತನಗೆ ದಕ್ಕುವುದಿಲ್ಲವೆಂದು ಗೊತ್ತಿದ್ದರೂ, ತೇಜಣ್ಣನ ಜೊತೆಗೆ ಓಡಾಡಿಯಾದರೂ ಆ ಜಾಗವನ್ನು ತನ್ನದಾಗಿಸಿಕೊಳ್ಳುವುದು ಕಷ್ಟಸಾಧ್ಯವಲ್ಲ. ಅದೂ ಅಲ್ಲಿ ವಾಸವಾಗಿರುವ ಅಕ್ಕಯ್ಯನನ್ನು ಓಡಿಸಿದರೆ ಸಾಧ್ಯವೆನ್ನುವುದು ಸ್ಪಷ್ಟವಾಯಿತು. ಇದನ್ನು ನಾಳೆ ತೇಜಣ್ಣ ಬಂದಾಗ ಹೇಳಲೇಬೇಕು ಅನಿಸಿತು. ಅದಕ್ಕಾಗಿಯೇ ಹೆಂಡತಿಯನ್ನು ಸಮಾಧಾನಿಸಿ ತಾನು ದೊಡ್ಡ ಜನ ಆಗಬೇಕೆಂದು ಅವನು, 'ಇಕ್ಕಳ್ಳೆ, ಈಗ ಅದು ಅಪ್ಪಯ್ಯ ದೊಡ್ಡಪ್ಪನಿಗೆ ಮಾಡಿಕೊಟ್ಟ ಜಾಗವಾದರೂ ಅಲ್ಲಿ ಅಕ್ಕಯ್ಯ ಇದ್ದಾಳಲ್ಲ. ಅವಳು ಅಲ್ಲಿಂದ ಹೋಗದೆ ನಾವು ತೇಜಣ್ಣನತ್ರ ಆ ಜಾಗವನ್ನು ಕೇಳುವುದಾದರೂ ಹೇಗೆ, ಅಲ್ವ?' ಎಂದ.

'ನೀವು ಅದೆಲ್ಲಾ ಬಿಡಿ. ನಿಜವಾಗಿಯೂ ಅಕ್ಕಯ್ಯನಿಗೆ ಆ ಜಾಗ ಕೊಡಬೇಕೆಂದಿದ್ದರೆ ಅಲ್ಲಿಯೇ ಕೆಳಗಿನ ಹಿರಿಯರು ಬಾಳಿದ ಮನೆಯನ್ನೇ ಅವಳಿಗೆ ಕೊಡಬೇಕಾಗಿತ್ತು. ಅದನ್ನು ಯಾರೋ ಕಲ್ಲುಕುಟ್ಟಿಗರಿಗೆ ಬಾಡಿಗೆ ಕೊಡುತ್ತಿರಲಿಲ್ಲ. ಮೇಲಿನ ಜೋಪಡಿಯನ್ನು ಅಕ್ಕಯ್ಯನಿಗೆ ಯಾಕೆ ಕೊಡಬೇಕಿತ್ತು? ಅಂದರೆ ಅವರ ಉದ್ದೇಶವಿದ್ದದ್ದು ಅಕ್ಕಯ್ಯನಿಗೆ ಜೋಪಡಿಯನ್ನು ಕೊಟ್ಟು ಅವಳನ್ನು ಇವತ್ತ ನಾಳೆಯೋ ಒಕ್ಕಲೆಬ್ಬಿಸುವುದೇ ಇದ್ದೀತು. ನೀವು ತೇಜಣ್ಣನ ಕಿವಿಯೂದಿದರೆ ಅಕ್ಕಯ್ಯನನ್ನು ಅಲ್ಲಿಂದ ಓಡಿಸಿಯಾರು. ಆ ಜಾಗ ಅವರ ಬಿಟ್ಟಿಚಾಕರಿ ಮಾಡುವ ನಿಮಗೆ ಕೊಡದಿರುತ್ತಾರಾ?'

'ಅಕ್ಕಯ್ಯ ಅಲ್ಲಿ ಬಿಟ್ಟು ಎಲ್ಲಿಗೆ ಹೋಗಬೇಕು. ಇನ್ನು ಅವಳ ಗಂಡ ದುಡಿದು ತಂದು ಬೇರೆ ಜಾಗ ತೆಗೆದುಕೊಳ್ಳುವುದು ಅಷ್ಟರಲ್ಲಿಯೇ ಇದೆ. ಆ ಜಾಗ ನಮ್ಮದಾಗುವುದು ಕನಸಿನ ಮಾತು'.

'ನಿಮಗೆ ಯಾವುದೂ ಬೇಡ. ನೀವು ಊರಿಗೆ ಉಪಕಾರಿ, ಮನೆಗೆ ಮಾರೀಂತ ಹೇಳುತ್ತಾರಲ್ಲ ಹಾಗೆ ಸುತ್ತಾಡುತ್ತಾ ಇರಿ. ಅವರನ್ನು ಕರೆದುಕೊಂಡು ಬರಲಿಕ್ಕೆ, ಇವರಿಗೆ ಡ್ರಾಪ್ ಕೊಡ್ಲಿಕ್ಕೆ, ಮತ್ತೊಬ್ಬರಿಗೆ ಸೈನ್ ಮಾಡಲಿಕ್ಕೆ... ಹೀಗೆ ಚಾಕರಿ ಮಾಡಿಕೊಂಡು ಮಠಕ್ಕೆ ಬಿಟ್ಟ ಹೋರಿಯ ಹಾಗೆ ಇರಿ' ಎಂದೆನ್ನುತ್ತಾ ಅಂಗಳದಲ್ಲಿ ತಮ್ಮಷ್ಟಕ್ಕೇ ಆಡಿಕೊಂಡಿದ್ದ ಮಕ್ಕಳನ್ನು, ಏ ಕೂಂಪರಾ... ಏ ಕಾಂಪರಾ ಎಂದು ಕೂಗಿ ಕರೆದಳು. ರಾಘವ ಬಾಯಿಗೆ ಬೀಗ ಜಡಿದವರಂತೆ ಮೌನವಾಗಿ ಅಂಗಳಕ್ಕೆ ಇಳಿದ.

***

ಸುಮಾರು ಹನ್ನೆರಡು ಗಂಟೆ ಮಟ ಮಟ ಮಧ್ಯಾಹ್ನದ ಹೊತ್ತಿಗೆ ಮೂಸಾನ ನಿಸ್ಸಾನ್ ಕಾರು ಏರ್‌ಪೋರ್ಟಿನಿಂದ ತೇಜಣ್ಣನನ್ನು ಕರೆದುಕೊಂಡು ಹಳ್ಳಿಯ ಮನೆಯ ಮುಂದೆ ನಿಂತಿತು. ಕಾರಿನಿಂದ ಇಳಿಯುತ್ತಲೇ ರಾಘವನಿಗೆ ಫೋನ್ ಮಾಡಿ ತತ್‌ಕ್ಷಣವೇ ಬರುವಂತೆ ಕರೆದರು. ರಾಘವ ಸರಳಾಳಿಗೂ ಹೇಳದೆ ಬಿದ್ದೆನೋ ಎದ್ದೆನೋ ಎಂದು ನವೀನಣ್ಣ ಕೊಡಿಸಿದ ಬೈಕ್ ಅನ್ನು ಹಿಡಿದುಕೊಂಡು ಹಿರಿಯರ ಮನೆಗೆ ಬಂದ.

'ನಾನು ನಿಮಗೆ ಫೋನ್ ಮಾಡಿದ್ದು ಇದಕ್ಕೇನೆ. ನೋಡಿ, ನಮ್ಮ ಊರಿನ ಮಠ ಈಗ ಜಗತ್ಪ್ರಸಿದ್ಧವಾಗಿದೆಯಂತೆ. ಅದಕ್ಕೆ ರಸ್ತೆ ಅಗಲೀಕರಣ ಆಗ್ತಾ ಇದೆ. ನಿಮ್ಮ ಗದ್ದೆಯ ಎರಡೂ ಕಡೆಯಿಂದಲೂ ಐದು ಐದು ಫೀಟ್ ಅಗಲ ಮಾಡಲಿಕ್ಕೆ ಗೂಟ ಹಾಕಿಟ್ಟಿದ್ದಾರೆ. ಎರಡೂ ಕಡೆಗೆ ಇಷ್ಟಿಷ್ಟು ಜಾಗ ಹೋದರೆ ಎಂತ ಮಾಡುವುದು? ಎಷ್ಟೆಂದರೂ ಹಿರಿಯರ ಜಾಗವಲ್ಲವೇ? ಇದನ್ನು ನೋಡಿ ಸುಮ್ಮನಿರ್ಲಿಕ್ಕೆ ಆಗ್ತದಾ?' ಸ್ವಲ್ಪ ತೇಜಣ್ಣನನ್ನು ಕುಟುಕುವಂತೆ ಹೇಳಿದ ರಾಘವ. ತಾನು ಹೇಳದಿದ್ದರೆ ಅವರಿಗೇನು ಕಣ್ಣು ಕಾಣಿಸದ್ದೇ? ಅನುಭವಸ್ಥ, ಪರವೂರಿನಲ್ಲಿರುವವ, ನಾಲ್ಕು ಜನ ದೊಡ್ಡವರೊಡನೆ ವ್ಯವಹರಿಸುವಾತ, ಅಂತಹವರಿಗೆ ತಾನೇನು ಹೇಳುವುದು? ಹೇಳುವುದು ಅನಿವಾರ್ಯ. ಹೇಳುವುದನ್ನು ಹೇಳುವ ರೀತಿಯಲ್ಲಿಯೇ ಹೇಳಬೇಕೆನ್ನುವ ಉದ್ದೇಶದಿಂದ ಊದಿದ್ದೇ ತೇಜಣ್ಣನಿಗೆ ಬೀಪಿ ಏರಿ, 'ಇದೆಲ್ಲಾ ಗೂಟ ಹಾಕಿದ್ದು ಯಾರು? ಯಾರನ್ನು ಕೇಳಿ ಹಾಕಿದ್ದಾರೆ? ಇದೇನು ಹೈವೇ ಪ್ರಾಧಿಕಾರವೇ ಅಥವಾ ಪಂಚಾಯತ್‌ನವರು ಮಾಡುವುದೇ?' ಮೂಲವನ್ನು ಹುಡುಕುವ ಪ್ರಶ್ನೆಯನ್ನು ಕೇಳಿದರು. ರಾಘವ ಅವರ ಏರಿದ ದನಿಯ ಮಾತು ಕೇಳಿ ಸರೂತ ನಿಂತು, 'ಅದು ನಮ್ಮ ಪಂಚಾಯತ್‌ನವರಿಗೂ ಗೊತ್ತಿರುವ ವಿಷಯವೇ. ಇಲ್ಲಿ ಆಗುತ್ತಾ ಇರುವಂತದ್ದು ಹೈವೇ ಪ್ರಾಧಿಕಾರದ್ದೇ' ಎಂದು ಮುಗ್ಧನಂತೆ ನಿಂತ.

'ಅಲ್ಲ ಮಾರಾಯಾ, ಎರಡು ಕಡೆಯೂ ಇಷ್ಟು ಜಾಗೆ ಹೋದರೆ ಎಂತ ಮಾಡುವುದು? ಈಗ ಇದನ್ನು ನಿಲ್ಲಿಸಬೇಕಲ್ಲ?' ತೇಜಣ್ಣ ಎಷ್ಟೇ ಅನುಭವಸ್ಥನಾದರೂ ರಾಘವನಿಗೆ ಜಾಗದ ವ್ಯವಹಾರದಲ್ಲಿ ಮಂದಣ್ಣನಂತೆ ಗೋಚರಿಸಿದರು. ಕಬ್ಬಿಣ ಹದವಾದಾಗಲೇ ಬಗ್ಗಿಸಬೇಕೆನ್ನುವುದು ಅವನಿಗೆ ಗೊತ್ತಾಯಿತು.

'ಇದನ್ನು ನಿಲ್ಲಿಸುವುದು ಹೇಗೆ? ಇದು ಸರಕಾರದ ಪ್ರೊಜೆಕ್ಟ್ ಅಲ್ಲವೇ? ಸರಕಾರಕ್ಕೆ ಎದುರು ನಿಲ್ಲುವುದು ಹೇಗೆ?'

'ಅದು ನನಗೆ ಗೊತ್ತಿಲ್ಲ. ಎಷ್ಟು ಖರ್ಚಾದರೂ ಪರವಾಗಿಲ್ಲ. ಯಾರನ್ನಾದರೂ ಹಿಡಿದು ಈಗ ಇದನ್ನು ನಿಲ್ಲಿಸಬೇಕಲ್ಲ. ನೋಡು, ನೀನು ಹೇಳಿದ್ದರಿಂದ ನನಗೆ ಗೊತ್ತಾಯಿತು. ನಮ್ಮ ಅಕ್ಕಯ್ಯನೇ ಇಲ್ಲಿದ್ದರೂ ಒಂದು ಮಾತು ಹೇಳಲಿಲ್ಲ ನೋಡು ಅವಳು' ಎಂದು ಅಕ್ಕಯ್ಯನ ಮೇಲೆ ಸಿಟ್ಟಾದಾಗ ರಾಘವನಿಗೆ ದಾಳ ಸರಿಯಾದ ರೀತಿಯಲ್ಲಿಯೇ ಬಿದ್ದಿದೆ ಎಂದೆನಿಸಿ ಸಂತಸವಾಯಿತು.

'ನನಗೆ ಗೊತ್ತಿರುವ ಜನ ಇದ್ದಾರೆ. ಈಗ ಈ ಕೆಲಸವನ್ನು ನಿಲ್ಲಿಸುವ. ನೀವು ನನ್ನ ಜೊತೆಗೆ ಬರ್ತೀರಾ? ಪಂಚಾಯತ್‌ನ ಸದಸ್ಯ ಹರಿರಾಮನನ್ನು ಮಾತನಾಡಿಸಿಕೊಂಡು ಬರುವ'. ನಿಂತ ಮೆಟ್ಟಿನಲ್ಲಿಯೇ ತೇಜಣ್ಣನನ್ನು ಹೊರಡುವಂತೆ ಹೇಳಿದ.

'ಹೋಗುವ... ಅವನು ಎಲ್ಲಿ ಸಿಗುತ್ತಾನೆ? ಅವನನ್ನೇ ಇಲ್ಲಿಗೆ ಕರೆಸಿದರೆ ಹೇಗೆ?'

'ಅವನು ಬರ್ಲಿಕ್ಕಿಲ್ಲ. ಮನೆಗೆ ತುಂಬಾ ಜನ ಬರ್ತಾ ಇರ್ತಾರೆ. ನಾವೇ ಅಲ್ಲಿಗೆ ಹೋಗಬೇಕಾದೀತು. ಇಲ್ಲದಿದ್ದರೆ ನನ್ನ ಮನೆಗೆ ಕರೆಸುವ, ಬಂದಾನು?' ಅರ್ರೆ! ತಾನು ಕರೆದಾಗ ಬರದವನು ರಾಘವನ ಮನೆಗೆ ಹೇಗೆ ಬಂದಾನು? ರಾಘವನಿಗೆ ಉದ್ದೇಶವಿದ್ದದ್ದು ಅದಲ್ಲ! ತೇಜಣ್ಣನಿಗೆ ಆತಿಥ್ಯ ಕೊಡಿಸಿ ತನ್ನ ಅಪ್ಪ ಮಾಡಿಟ್ಟ ಅಕ್ರಮಸಕ್ರಮದ ಜಾಗವನ್ನು ಹೇಗಾದರೂ ಮಾಡಿ ಅವರಿಂದ ಕಬಳಿಸುವುದೇ ಆಗಿತ್ತು.

'ಅವನು ನಿನ್ನ ಮನೆಗೆ ಬರ್ತಾನಾ? ಅವನನ್ನು ನೋಡಲಿಕ್ಕೆ ಬರುವ ಜನರನ್ನು ಬಿಟ್ಟು ನಿನ್ನ ಮನೆಗೆ ಬರಲಿಕ್ಕೆ ಅವನಿಗೆ ಪುರುಸೊತ್ತು ಉಂಟಾ ಮಾರಾಯಾ?'

'ಅದು ಅವನನ್ನು ಬರುವ ಹಾಗೆ ಮಾಡುವ. ನನ್ನ ಹೆಂಡತಿ ಹೇಳಿದರೆ ಮುಗಿಯಿತು, ಅವನು ಬರ್ತಾನೆ'. ಈ ಮಾತು ಯಾವ ಅರ್ಥದಲ್ಲಿ ಹೇಳಿದನೋ ತೇಜಣ್ಣ ಒಳಗೊಳಗೆ ನಗುತ್ತಾ, 'ಕಾರಣ ಏನಾದರೇನು? ತಾನು ಬಂದ ಕೆಲಸ ಮುಗಿದರೆ ಸಾಕು' ಎಂದುಕೊಂಡವರೇ, 'ಸರಿ, ಮೂಸನ ಕಾರನ್ನು ಕಳುಹಿಸುವ. ನಿನ್ನ ಮನೆಗಾದರೆ ನಾನು ಬೈಕ್‌ನಲ್ಲಿಯೇ ಬಂದೇನು' ಎಂದು ಮೂಸನಿಗೆ ಕಾರಿನ ಬಾಡಿಗೆಯನ್ನು ಕೊಟ್ಟು ಕಳುಹಿಸಿದರು.

'ಬೈಕ್‌ನಲ್ಲಿಯಾ? ಬೇಡ, ನನ್ನ ಹೆಂಡತಿ ಬೈದಾಳು. ಮನೆಗೆ ಹೋಗಿ ಕಾರು ತರುತ್ತೇನೆ. ನೀವು ಬೇಕಾದರೆ ಇಲ್ಲಿ ಅವರು ಗೂಟ ಹಾಕಿದ್ದನ್ನು ನೋಡುತ್ತಾ ಇರಿ' ಎಂದು ಬೈಕ್ ತೆಗೆದುಕೊಂಡು ಹೋದ. ತೇಜಣ್ಣ ಆಲೋಚನೆಗೊಳಗಾದರು. ತಾನು ರಾಘವನಿಗೆ ಧರ್ಮಕರ್ಮಕ್ಕೆಂದು ಆದಿನ ಮೂವತ್ತು ಸಾವಿರ ಕೊಟ್ಟಿದ್ದು ಅವನಿಗೆ ಗತಿಯಿಲ್ಲ, ಬಡವನೆನ್ನುವ ಕಾರಣಕ್ಕೆ. ಅವನ ಹತ್ತಿರ ಬೈಕ್ ಇದೆ, ಕಾರು ಇದೆ ಅಂತಿದ್ದಾನಲ್ಲ. ಹಾಗಾದರೆ ಅವನ ವ್ಯವಹಾರ ಎಂತದ್ದು? ನಾನು ಅವನು ಅತ್ತಿದ್ದಕ್ಕೆ ಮೋಸ ಹೋದೆನೆ? ಇರಲಿ, ಬಡವನಿಗೆ